



## 3

ಸುಡುವಾಗ್ನಿಯೇ ಕೊಡು ನನಗೆ ನಿನ್ನ ಶಕ್ತಿಯನು
ಉರಿ ಉರಿಸಿ ಕೊಲ್ಲುವೆನು ಅವನ ಮರೆವನ್ನು
ಜಲವೇ ನೀಡೆನಗೆ ನಿನ್ನ ರಭಸ ಬಲವನ್ನ
ಕೊಚ್ಚಿ ಹಾಕುವೆನು ಹುಸಿ ಒಲವ ದಡಗಳನ್ನ॥
ಆ ಮಾರನಲ್ಲಿ ಪಲ್ಲಂಗವಿಲ್ಲಿ ಪ್ರಣಯ ಬೇಡದಾಯ್ತೆ
ಮಕರಂದ ಸವಿಯು ಮೈಗಂಧ ಗಮಲು ಕಾಡದಾಯ್ತೆ
ಮದರಂಗಿ ಬಣ್ಣ ಹನಿಗೂಡಿ ಕಣ್ಣ ಇರುಳೆಲ್ಲ ವ್ಯರ್ಥವಾಯ್ತೆ
ಕೊಟ್ಟಂತ ಮಾತು ಇಟ್ಟಂತ ಆಣೆ ಎಲ್ಲಾನು ಮರೆತು ಹೋಯ್ತೆ॥
ಹಾವಂತ ಅವಳ ಬಾಹುಗಳನು ಅವನೇಗೆ ಅಪ್ಪಿದ
ಮುಳ್ಳಂತ ಪಲ್ಲಂಗದಾಸಿಗೆಯನು ಅವನೇಗೆ ಒಪ್ಪಿದ
ಅಮೃತವ ಚಪ್ಪರಿಸಿ ಹುಳಿಮಜ್ಜಿಗೆಯನೇಗೆ ಈಂಟಿದ
ನಾನೊಂದು ಮರುಳು ಪ್ರೇಮ ಸುಳ್ಳೆಂದವನು ಸಾರಿದ॥
ಈ ದಡವನೊಲ್ಲೆಂದು ಆ ದಡವನೇಗೆ ಸೇರಿದ
ಎದೆ ಮುತ್ತನೊಯ್ದು ಸಂತೆಯಲಿ ಅವ ಮಾರಿದ॥



## 4

ಎಂಥ ಘಾತ ಎಂಥ ಮೋಸ ಪ್ರೇಮ ಇಂದು ಅನಾಥ
ಗೌರಿಯ ಮರೆತ ಶಿವನು ಗಂಗೆಯ ಮನವ ಸೋತ
ಚಂದನವೆ ಮೈ ಗಂಧವೇ ಪರಿಮಳದ ಪುಷ್ಪಗಳೇ
ಉರಿವ ಕಿರು ಜ್ಯೋತಿಗಳೇ ಹಂಸತೂಲಿಕ ಮಂಚವೇ
ಬಂದು ಬೇಡುವನವನು ನೊಂದಂತೆ ಕಪಟಿ ನಟಿಸಿ
ಕಣ್ಣ ಹನಿಗಳೇ ಬೇಡುವೆ ನಿಮ್ಮ ಕರಗಿಸಬೇಡಿ ಮುನಿಸಾ॥
ನಿಷ್ಠೆಯಿಲ್ಲದ ಪ್ರೇಮವನೊಲ್ಲೆ ಇರುವೆ ನಾನು ಒಂಟಿ
ಕಾಳಗಿಚ್ಚು ಉರಿದರೂ ಉಳಿದಿಹುದು ಮುಳ್ಳಕಂಟಿ
ನೂರು ಶೂಲಗಳಿರಿದಂತೆ ಪ್ರೇಮವಂಚಿತೆ ನಾನು
ವಿರಹದುರಿ ಚಿತೆಯಲ್ಲಿ ನನ್ನಂತೆ ಬೇಯಲಿ ಅವನು॥
ಜಲವೆ ತೊಳೆ ಕೊಳೆಯಂತೆ ಕಣ್ಣೊಳಗಿನವನ ರೂಪ
ಅಳಿವಂತೆ ನೆನಪು ವಿಧಿಸಿಕೊಂಡಿಹೆನು ಮರೆವಿನ ಶಾಪ
ಕಣ್ಣ ಕದಗಳೆ ತೆರೆಯದಿರಿ ಹಾಕಿಹೆನು ಹೃದಯಕ್ಕೆ ಅಗುಳಿ
ಆತ್ಮಸಂಗಾತನ ಹುಡುಕಿ ಹೋದರೆ ಸಿಗುವುದಂತೆ ಕದಳಿ॥